1 9 JUN 2018

# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟದೆ)

ಫೋನ್:08232236255

ಇಮೇಲ್:aeemdr2@rediffmail.com

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ರವರಕಛೇರಿ,
ಗ್ರಾಮಾಂತರ ಉಪ ವಿಭಾಗ, ಮದ್ದೂರು

ಕ್ರಮಾಂಕ:ಸಕಾನಿಇಂ.(ವಿ)/ಹಿಸ/ಗ್ರಾ.ಉವಿ/ಮದ್ದೂರು/ 610-18 ದಿನಾಂಕ: 04.06.2018

## ವಿದ್ಯುತ್ ಜನಸಂಪರ್ಕ ಸಭಾ ನಡಾವಳಿ

ಅಧೀಕ್ಷಕ ಇಂಜಿನಿಯರ್(ವಿ), ಸೆಸ್ಕ್, ವೃತ್ತ ಕಛೇರಿ, ಮಂಡ್ಯ ರವರ ಅಧ್ಯಕ್ಷತೆಯಲ್ಲಿ ವಿಭಾಗೀಯ ಕಛೇರಿ ಮದ್ದೂರಿನಲ್ಲಿ ದಿನಾಂಕ: 02.06.2018 ರಂದು ಜರುಗಿದ ಗ್ರಾಮಾಂತರ ಉಪವಿಭಾಗದ ವಿದ್ಯುತ್ ಜನಸಂಪರ್ಕ ಸಭೆಯ ನಡಾವಳಿ.

ಸಭೆಯಲ್ಲಿ ಹಾಜರಿದ್ದ ಅಧಿಕಾರಿ/ನೌಕರರ ವಿವರ:

| ಕ್ರಮ ಸಂಖ್ಯೆ | ಅಧಿಕಾರಿ/ಸಿಬ್ಬಂಧಿ | ಹುದ್ದೆ | ಕಾರ್ಯನಿರ್ವಹಿಸುತ್ತಿರುವ ಸ್ಥಳ |
|---|---|---|---|
| 1 | ಶ್ರೀ ಶ್ರೀನಿವಾಸಮೂರ್ತಿ | ಅಇಂ(ವಿ) | ವೃತ್ತ ಕಛೇರಿ, ಮಂಡ್ಯ |
| 2 | ಶ್ರೀಮತಿ ಶ್ವೇತಾ ಎಂ.ಎಸ್. | ಕಾಇಂ(ವಿ) | ವೃತ್ತ ಕಛೇರಿ, ಮಂಡ್ಯ |
| 3 | ಶ್ರೀ ರವಿಶಂಕರ್ | ಕಾನಿಇಂ(ವಿ) | ವಿಭಾಗೀಯ ಕಛೇರಿ, ಮದ್ದೂರು |
| 4 | ಶ್ರೀ ಜಿ.ಯು.ಮಂಜುನಾಥ್ | ಸಕಾಇಂ(ವಿ) | ಮದ್ದೂರು ಉಪವಿಭಾಗ-1 |
| 5 | ಶ್ರೀ ಶ್ರೀಕಾಂತ್ ಎಸ್. | ಸಕಾಇಂ(ವಿ) | ಮದ್ದೂರು ಉಪವಿಭಾಗ-2 |
| 6 | ಶ್ರೀ ನಾಗರಾಜ್ | ಲೆಕ್ಕಾಧಿಕಾರಿ | ಮದ್ದೂರು ವಿಭಾಗ |
| 7 | ಶ್ರೀ ಪ್ರಕಾಶ್ | ಸಇಂ(ವಿ) | ನಗರ ಉಪವಿಭಾಗ |
| 8 | ಶ್ರೀ ಸಂತೋಷ್ ಎಂ | ಕಿಇಂ(ವಿ) | ಬೆಸಗರಹಳ್ಳಿ ಶಾಖೆ |
| 9 | ಶ್ರೀ ನಾಗೇಶ್ | ಕಿಇಂ(ವಿ) | ಕೊಪ್ಪ ಶಾಖೆ |
| 10 | ಶ್ರೀ ಶಿವರಾಜು | ಕಿಇಂ(ವಿ) | ಕೆಸ್ತೂರು ಶಾಖೆ |
| 11 | ಶ್ರೀ ತೇಜ್‌ಪ್ರಕಾಶ್ | ಕಿಇಂ(ವಿ) | ಕೆ.ಹೊನ್ನಲಗೆರೆ ಶಾಖೆ |
| 12 | ಶ್ರೀ ರಾಜೇಶ್ | ಕಿಇಂ(ವಿ) | ಕೆ.ಎಂ.ದೊಡ್ಡಿ ಶಾಖೆ |
| 13 | ಶ್ರೀ ಶಿವರಾಮು | ಕಿಇಂ(ವಿ) | ಕೆ.ಎಂ.ದೊಡ್ಡಿ ಶಾಖೆ |

S.E.E (Elect) Works Circle CESC Mandya
S.E.E (Elect)

1389 22/6/18

AEE(e) 20/6

ಸಭೆಯಲ್ಲಿ ಹಾಜರಿದ್ದ ಎಲ್ಲಾ ಗ್ರಾಹಕರು/ನೌಕರರುಗಳನ್ನು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಸೆಸ್ಕ್, ಮದ್ದೂರು ಉಪವಿಭಾಗ-1 ರವರು ಸ್ವಾಗತಿಸಿದರು.

ಮೊದಲಿಗೆ ಅಧೀಕ್ಷಕ ಇಂಜಿನಿಯರ್(ವಿ), ಮಂಡ್ಯರವರು ಹಿಂದಿನ ಸಭೆಯ ಸಭಾ ನಡಾವಳಿಯನ್ನು ಗ್ರಾಹಕರ ಸಮ್ಮುಖದಲ್ಲಿ ಓದಿ ಸಭೆಯಲ್ಲಿ ಹಾಜರಿದ್ದ ಕಿಇಂ(ವಿ)/ಸಹಾಯಕ ಇಂಜಿನಿಯರ್(ವಿ)ರವರುಗಳ ಕಾರ್ಯವೈಖರಿಯನ್ನು ವಿಚಾರಿಸಿ ಸಭೆಯನ್ನು ಮುಂದುವರಿಸಿದರು.

| ಕ್ರಮ ಸಂಖ್ಯೆ | ಗ್ರಾಹಕರ ದೂರುಗಳು | ಕೈಗೊಂಡ ಕ್ರಮಗಳು |
|---|---|---|
| | ಗ್ರಾಹಕರು -ಶ್ರೀ ರಾಜು, ಬ್ಯಾಲದಕೆರೆ | |
| 1 | ಕಳೆದ 2/3 ತಿಂಗಳಿಂದಲೂ ನಮ್ಮ ಗ್ರಾಮದಲ್ಲಿ ಸರಿಯಾದ ವಿದ್ಯುತ್ ಪೂರೈಕೆ ಇಲ್ಲ. ನಿರಂತರ ಜ್ಯೋತಿ ಇದ್ದರೂ ನಿರಂತರ ವಿದ್ಯುತ್ ಸಮಸ್ಯೆ ಇದೆ. ದಯಮಾಡಿ ಸರಿಪಡಿಸಿಕೊಡಿ. | ಸಂಬಂಧಪಟ್ಟ ಕೆಸ್ತೂರು ಶಾಖಾಧಿಕಾರಿ ರವರನ್ನು ವಿಚಾರಿಸಲಾಗಿ ಜಂಗಲ್ ಕಟಿಂಗ್‌ನಿಂದಾಗಿ ಸದರಿ ಫೀಡರ್ ವಿದ್ಯುತ್ ಸಮಸ್ಯೆ ಇತ್ತು. ಈಗ ಜಂಗಲ್ ಕಟಿಂಗ್ ಮಾಡಲಾಗಿದ್ದು ಸಮಸ್ಯೆ ಬಗೆ ಹರಿಸಲಾಗಿದ್ದು ನಿರಂತರವಾಗಿ ವಿದ್ಯುತ್ ಪೂರೈಕೆ ಮಾಡಲಾಗುತ್ತಿದೆ ಎಂದು ತಿಳಿಸಿದರು. ಅಧೀಕ್ಷಕ ಇಂಜಿನಿಯರ್(ವಿ) ಮಂಡ್ಯ ರವರು ಮಾತನಾಡಿ ಸಭೆಯಲ್ಲಿದ್ದ ಎಲ್ಲ ರೈತರಿಗೆ ವಿದ್ಯುತ್ ಸಮಸ್ಯೆಗಳಿಗೆ ಸಂಬಂಧಿಸಿದಂತೆ 1912ಗೆ ಕರೆಮಾಡಿ ದೂರು ನೀಡಬಹುದು ಎಂದು ತಿಳಿಸಿದರು. |
| | ಗ್ರಾಹಕರು- ಶ್ರೀ ಶಂಕರ್, ಬೆಳತೂರು ಗ್ರಾಮ | |
| 2 | ನಮ್ಮ ಐಪಿ ಸೆಟ್‌ಗೆ ಕಳೆದ 3/4 ತಿಂಗಳಿಂದಲೂ ಸರಿಯಾದ ವಿದ್ಯುತ್ ಪೂರೈಕೆ ಆಗುತ್ತಿಲ್ಲ. ಅಲ್ಲದೇ ವಿದ್ಯುತ್ ಪೂರೈಕೆಯ ಬಗ್ಗೆ ನಿಮ್ಮ ನಿಗಮದಿಂದ ಯಾವುದೇ ಮಾಹಿತಿಯೂ ಸಿಗುವುದಿಲ್ಲ. ರೈತರಾದ ನಮ್ಮ ಸ್ಥಿತಿ ಏನು? ಎಂದು ಕೇಳಿದರು. | ಅಧೀಕ್ಷಕ ಇಂಜಿನಿಯರ್(ವಿ) ಮಂಡ್ಯ ರವರು ಮಾತನಾಡಿ ಸಂಬಂಧಪಟ್ಟ ಬೆಸಗರಹಳ್ಳಿ ಶಾಖಾಧಿಕಾರಿ ರವರನ್ನು ವಿಚಾರಿಸಲಾಗಿ ಸದರಿ ಫೀಡರ್ ಹೆಚ್ಚುವರಿ ಭಾರ & ವಿದ್ಯುತ್ ಒತ್ತಡವನ್ನು ಹೊಂದಿರುವುದರಿಂದ ವಿದ್ಯುತ್ ಪೂರೈಕೆಯಲ್ಲಿ ಸಮಸ್ಯೆಯಾಗುತ್ತಿದೆ ಎಂದು ತಿಳಿಸಿದರು. ಮುಂದುವರೆದು ಸಮಸ್ಯೆ ಬಗೆಹರಿಸಲು ಲಿಂಕ್ ಲೈನ್ ಅಂದಾಜು ಪಟ್ಟಿ ತಯಾರಿಸಿ ಜರೂರಾಗಿ ಸಲ್ಲಿಸಲು ಬೆಸಗರಹಳ್ಳಿ ಶಾಖಾಧಿಕಾರಿಗೆ ಸೂಚಿಸಿದರು. |
| | ಗ್ರಾಹಕರು- ಚಂದಳ್ಳಿ ಗ್ರಾಮ | |
| 3 | ಗ್ರಾಮದ ಹೆಚ್ಚುವರಿ ಪರಿವರ್ತಕ 25ಕೆವಿಎ ಮಂಜೂರಾಗಿ 1 ವರ್ಷವೇ ಕಳೆದಿದೆ. ಆದರೆ ಇದುವರೆವಿಗೂ ಕಾಮಗಾರಿ ಪೂರ್ತಿಯಾಗಿಲ್ಲ ಎಂದು ತಿಳಿಸಿದರು. | ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮದ್ದೂರು ರವರು ಮಾತನಾಡಿ ಸಂಬಂಧಪಟ್ಟ ಕೆ.ಹೊನ್ನಲಗೆರೆ ಶಾಖಾಧಿಕಾರಿ ರವರನ್ನು ವಿಚಾರಿಸಲಾಗಿ ಕಾಮಗಾರಿ ಪೂರ್ಣಗೊಳ್ಳಲು 9 ಮೀಟರ್ ಆರ್‌ಸಿಸಿ ಕಂಬ ಹಾಗೂ ಎಸಿಎಸ್‌ಆರ್ ವೈರ್ ಬೇಕೆಂದು ತಿಳಿಸಿದರು. ಅಧೀಕ್ಷಕ ಇಂಜಿನಿಯರ್(ವಿ) ಮಂಡ್ಯ ರವರು ಜರೂರಾಗಿ ಕೊಡಿಸಿಕೊಡುವುದಾಗಿ ತಿಳಿಸಿದರು. |

| | | |
|---|---|---|
| | ಗ್ರಾಹಕರು- ಶ್ರೀ ಸುರೇಶ್ ಕೆ.ಬೆಳ್ಳೂರು ಗ್ರಾಮ 9620116051 | |
| 4 | ಆರ್‌ಯುಐಪಿ ಯೋಜನೆಯಡಿ (Y-25739) ಕಾರ್ಯಾದೇಶವಾಗಿದೆ. ಜರೂರಾಗಿ ಕಾಮಗಾರಿ ಪೂರ್ಣಗೊಳಿಸಿಕೊಡಿ ಎಂದು ತಿಳಿಸಿದರು. | ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮದ್ದೂರು ರವರು ಮಾತನಾಡಿ ಸಂಬಂಧಪಟ್ಟ ಶಾಖಾಧಿಕಾರಿಗೆ ಸೂಚಿಸಿ ಜರೂರಾಗಿ ಕಾಮಗಾರಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳುವಂತೆ ತಿಳಿಸಿದರು. |
| | ಗ್ರಾಹಕರು- ಶ್ರೀ ನಂದೀಶ್ ಹೆಬ್ಬರಳು ಗ್ರಾಮ 7975299976 | |
| 5 | ಕಳೆದ 3/4 ದಿನದಿಂದ ಗ್ರಾಮಕ್ಕೆ ವಿದ್ಯುತ್ ಇಲ್ಲದೇ ತುಂಬಾ ಸಮಸ್ಯೆ ಆಗಿದೆ ಎಂದು ತಿಳಿಸಿದರು. | ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮದ್ದೂರು ರವರು ಮಾತನಾಡಿ ಸಂಬಂಧಪಟ್ಟ ಕೆಸ್ತೂರು ಶಾಖಾಧಿಕಾರಿಗೆ ಸೂಚಿಸಿ, ಸದರಿ ಫೀಡರ್‌ನ ಜಂಗಲ್ ಕಟಿಂಗ್ ಮಾಡಿಸಿ ಗ್ರಾಮಕ್ಕೆ ತುರ್ತಾಗಿ ವಿದ್ಯುತ್ ಪೂರೈಸಲು ತಿಳಿಸಿದರು. |
| | ಗ್ರಾಹಕರು- ಶ್ರೀ ಮಹದೇವು, ಬೆಸಗರಹಳ್ಳಿ ಗ್ರಾಮ 9035289833 | |
| 6 | ಐಪಿ ಲಿಮಿಟ್‌ನ 63 ಕೆವಿಎ ಪರಿವರ್ತಕ ವಿಫಲಗೊಂಡಿದೆ. ಜರೂರಾಗಿ ಕೊಡಿಸಿಕೊಡಿ ಎಂದು ಕೋರಿದರು. | ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮದ್ದೂರು ರವರು ವಿಭಾಗೀಯ ಉಗ್ರಾಣ ಪಾಲಕರಿಗೆ ಮಾತನಾಡಿ ಜರೂರಾಗಿ ಪರಿವರ್ತಕ ಕೊಡಲು ತಿಳಿಸಿದರು. |
| | ಗ್ರಾಹಕರು- ಶ್ರೀ ವೆಂಕಟೇಶ್‌ಬಾಬು, ಸೊಳ್ಳೇಪುರ (ವಳಗೆರೆಹಳ್ಳಿ) ಗ್ರಾಮ 9844458352 | |
| 7 | ಗ್ರಾಮದ ಐಪಿ ಲಿಮಿಟ್‌ನಲ್ಲಿ ಅಳವಡಿಸಲಾಗಿರುವ 25ಕೆವಿಎ ಪರಿವರ್ತಕ ಪದೇ ಪದೇ ವಿಫಲಗೊಳ್ಳುತ್ತಿದ್ದು, ಹೆಚ್ಚುವರಿ ಪರಿವರ್ತಕ ಅಳವಡಿಸಿಕೊಟ್ಟು ವಿದ್ಯುತ್ ಸಮಸ್ಯೆ ಬಗೆಹರಿಸಿಕೊಡಿ ಎಂದು ಕೋರಿದರು. | ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮದ್ದೂರು ರವರು ಸಂಬಂಧಪಟ್ಟ ಬೆಸಗರಹಳ್ಳಿ ಶಾಖಾಧಿಕಾರಿಯನ್ನು ಕೇಳಲಾಗಿ ಸದರಿ ಪರಿವರ್ತಕ ಅಧಿಕ ಭಾರ & ಒತ್ತಡವನ್ನು ಹೊಂದಿದ್ದು ಪದೇ ಪದೇ ವಿಫಲಗೊಳ್ಳುತ್ತಿದೆ ಎಂದು ತಿಳಿಸಿದರು. ಅಲ್ಲದೇ 2018ನೇ ಸಾಲಿನಲ್ಲಿ ಅಕ್ರಮ-ಸಕ್ರಮ ಯೋಜನೆಯ ಫಲಾನುಭವಿಗಳು ಸದರಿ ಪರಿವರ್ತಕದ ಲಿಮಿಟ್‌ನಲ್ಲಿ ಇರುವುದಾಗಿ ಶಾಖಾಧಿಕಾರಿ ತಿಳಿಸಿದರು. ಅಧೀಕ್ಷಕ ಇಂಜಿನಿಯರ್(ವಿ) ಮಂಡ್ಯ ರವರು ಮಾತನಾಡಿ ಸಂಬಂಧಪಟ್ಟ ಶಾಖಾಧಿಕಾರಿ ಬೆಸಗರಹಳ್ಳಿ ರವರಿಗೆ ಸೂಚಿಸಿ Enhancement ಅಂದಾಜು ಪಟ್ಟಿ ತಯಾರಿಸಿ ಜರೂರಾಗಿ ಸಲ್ಲಿಸಲು ಬೆಸಗರಹಳ್ಳಿ ಶಾಖಾಧಿಕಾರಿಗೆ ಸೂಚಿಸಿದರು. |
| | ಗ್ರಾಹಕರು- ಶ್ರೀ ರಾಮಕೃಷ್ಣ, ಆಬಲವಾಡಿ ಗ್ರಾಮ 9731362799 | |
| 8 | ಅಕ್ರಮ-ಸಕ್ರಮ ಯೋಜನೆಯಡಿ ಹಣ ಪಾವತಿಸಿದ್ದು, ಮೂಲಭೂತ ಸೌಕರ್ಯಕ್ಕಾಗಿ ಅಂದಾಜು ಪಟ್ಟಿ ತಯಾರಿಸಿ ವಿಭಾಗೀಯ ಕಛೇರಿಗೆ ಸಲ್ಲಿಸಲಾಗಿದೆ. ದಯಮಾಡಿ ಮಂಜೂರು ಮಾಡಿಕೊಡಿ ಎಂದು ಕೋರಿದರು. | ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮದ್ದೂರು ರವರು ಮಾತನಾಡಿ ಜ್ಯೇಷ್ಠತಾ ಪಟ್ಟಿಯಾನುಸಾರ ಎಲ್ಲಾ ಗ್ರಾಹಕರಿಗೂ ಆರ್‌ಯುಐಪಿ ಯೋಜನೆಯಡಿ ಮೂಲಭೂತ ಸೌಕರ್ಯ ಕಲ್ಪಿಸಲು ಕ್ರಮ ಕೈಗೊಂಡಿರುವುದಾಗಿ ತಿಳಿಸಿದರು. |
| | ಗ್ರಾಹಕರು- ಶ್ರೀ ಬಸವಯ್ಯ, ನೀಲಕಂಠನಹಳ್ಳಿ ಗ್ರಾಮ 8694034752 | |
| 9 | ಅಕ್ರಮ-ಸಕ್ರಮ ಯೋಜನೆಯಡಿ ಹಣ ಪಾವತಿಸಿದ್ದು, ಮೂಲಭೂತ ಸೌಕರ್ಯಕ್ಕಾಗಿ ಅಂದಾಜು ಪಟ್ಟಿ ತಯಾರಿಸಿ ವಿಭಾಗೀಯ ಕಛೇರಿಗೆ ಸಲ್ಲಿಸಲಾಗಿದೆ. ದಯಮಾಡಿ ಮಂಜೂರು ಮಾಡಿಕೊಡಿ ಎಂದು ಕೋರಿದರು. | ಅಧೀಕ್ಷಕ ಇಂಜಿನಿಯರ್(ವಿ) ಮಂಡ್ಯ ರವರು ಮಾತನಾಡಿ ಜ್ಯೇಷ್ಠತಾ ಪಟ್ಟಿಯಾನುಸಾರ ಎಲ್ಲಾ ಗ್ರಾಹಕರಿಗೂ ಆರ್‌ಯುಐಪಿ ಯೋಜನೆಯಡಿ ಮೂಲಭೂತ ಸೌಕರ್ಯ ಕಲ್ಪಿಸಲು ಕ್ರಮ ಕೈಗೊಳ್ಳುವಂತೆ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮದ್ದೂರು ರವರಿಗೆ ತಿಳಿಸಿದರು. |

| | | |
|---|---|---|
| ಗ್ರಾಹಕರು- ನ ಅ ಕೃಷ್ಣ, ನಗರಕೆರೆ ಗ್ರಾಮ 9242834721 | | |
| 10 | ಸೌಭಾಗ್ಯ ಯೋಜನೆಯ ಬಗ್ಗೆ ಗ್ರಾಹಕರಿಗೆ ಸರಿಯಾದ ಮಾಹಿತಿ ಇಲ್ಲವಾಗಿದ್ದು, ಅರ್ಜಿಗಳನ್ನು ಪುನ: ಸ್ವೀಕರಿಸಲು ಅನುವು ಮಾಡಿಕೊಡಬೇಕೆಂದು ಕೋರಿದರು. | ಪ್ರತಿಕ್ರಿಯಿಸಿದ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮದ್ದೂರು ರವರು ಸದರಿ ಯೋಜನೆಯ ಅರ್ಜಿ ಸ್ವೀಕೃತಾ ಅವಧಿ ಮುಕ್ತಾಯಗೊಂಡಿದ್ದು, ಮುಂದಿನ ದಿನಗಳಲ್ಲಿ ಸದರಿ ಯೋಜನೆ ವಿಸ್ತಾರವಾದಲ್ಲಿ ಅರ್ಜಿಗಳನ್ನು ಪುನ: ಸ್ವೀಕರಿಸಲು ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು. |
| ಗ್ರಾಹಕರು- ನ ಅ ಕೃಷ್ಣ, ನಗರಕೆರೆ ಗ್ರಾಮ 9242834721 | | |
| 11 | ಗ್ರಾಹಕರು ಲಿಖಿತವಾಗಿ ನೀಡುವ ದೂರು ಅರ್ಜಿಗೆ ಸಂಬಂಧಿಸಿದಂತೆ ಅರ್ಜಿಯ ದಿನಾಂಕ, ಗ್ರಾಹಕರ ಹೆಸರು & ವಿಳಾಸ, ಗ್ರಾಹಕರ ದೂರು ಹಾಗೂ ದೂರು/ಸಮಸ್ಯೆ ನಿವಾರಣೆಯಾಗಿದೆಯೇ? ಇಲ್ಲವೇ? ದೂರನ್ನು ಸ್ವೀಕರಿಸಿದವರಾರು? ಎಂಬುದರ ಬಗ್ಗೆ ವಿವರವಾದ ಪುಸ್ತಕವನ್ನು ಇಟ್ಟಲ್ಲಿ ಗ್ರಾಹಕರಿಗೆ ತುಂಬಾ ಅನುಕೂಲವಾಗುವುದಾಗಿ ತಿಳಿಸಿದರು. | ಇದಕ್ಕೆ ಪ್ರತಿಕ್ರಿಯಿಸಿದ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮದ್ದೂರು ರವರು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಉಪವಿಭಾಗ 1 & 2 ರವರಿಗೆ ಸೂಚಿಸಿ ದೂರು ಪುಸ್ತಕವನ್ನು ಕಟ್ಟು ನಿಟ್ಟಾಗಿ ನಿರ್ವಹಿಸಲು ಕ್ರಮ ಕೈಗೊಳ್ಳುವಂತೆ ಸೂಚಿಸಿದರು. ಅಲ್ಲದೇ ಸಮಸ್ಯೆ ಬಗೆಹರಿಯಿತೇ ಅಥವಾ ಇಲ್ಲವೇ ಎಂಬುದು ಸ್ಪಷ್ಟವಾಗಿರಬೇಕು. ಜೊತಗೆ ಬಗೆಹರಿಯದಿದ್ದಲ್ಲಿ ಅದಕ್ಕೆ ಸ್ಪಷ್ಟೀಕರಣ ನೀಡಿ ಷರಾ ಕಾಲಂನಲ್ಲಿ ನಮೂದಿಸಿರಬೇಕು ಎಂದು ಸೂಚಿಸಿದರು. |

ಈ ಮೇಲಿನ ಎಲ್ಲಾ ವಿಷಯಗಳ ಬಗ್ಗೆ ಚರ್ಚಿಸಿ, ಅಧೀಕ್ಷಕ ಇಂಜಿನಿಯರ್(ವಿ) ಮಂಡ್ಯ ರವರು ಮಾತನಾಡಿ ಸಭೆಯಲ್ಲಿದ್ದ ಕಿರಿಯ ಇಂಜಿನಿಯರ್(ವಿ)/ಸಹಾಯಕ ಇಂಜಿನಿಯರ್(ವಿ)ರವರುಗಳಿಗೆ ಸಮಸ್ಯೆ ಬಗೆಹರಿಸಲು ಮೇಲಾಧಿಕಾರಿಗಳೇ ಆಗಬೇಕಾಗಿಲ್ಲ. ನಿಮ್ಮ ವ್ಯಾಪ್ತಿಯಲ್ಲಿನ ಸಮಸ್ಯೆಗಳನ್ನ ನೀವೇ ಸರಿಪಡಿಸಬೇಕು. ಗ್ರಾಹಕರ ದೂರವಾಣಿ ಕರೆಗಳನ್ನ ಸ್ವೀಕರಿಸಿ, ಅವರ ಸಮಸ್ಯೆಗಳಿಗೆ ಸ್ಪಂಧಿಸಬೇಕು ಎಂದು ತಿಳಿಸಿದರು.

ಅಲ್ಲದೇ ಸಭೆಯಲ್ಲಿದ್ದ ಗ್ರಾಹಕರನ್ನ/ರೈತರನ್ನ ಉದ್ದೇಶಿಸಿ ಮಾತನಾಡುತ್ತಾ ಗ್ರಾಹಕರಾದ ನಿಮ್ಮಲ್ಲೂ ಸಂಘಟನೆ ಇರಬೇಕು. ಎಲ್ಲಿಯವರೆವಿಗೂ ರೈತರಲ್ಲಿ ಸಂಘಟನೆ ಇರುತ್ತದೆಯೋ ಅಲ್ಲಿಯವರೆವಿಗೂ ಸಮಸ್ಯೆ ಬಗೆಹರಿಸಬಹುದು. ರೈತರ ಜೊತೆ ಒಗ್ಗೂಡಿ ನಾವು-ನೀವುಗಳು ಕಾರ್ಯನಿರ್ವಹಿಸೋಣ ಎಂದು ತಿಳಿಸಿದರು. ಮುಂದುವರೆದು ಪತ್ರಿಕಾ ಮಾಧ್ಯಮದವರಿಗೆ ಹಾಗೂ ಗ್ರಾಹಕರಿಗೆ ವಂದಿಸಿ ಮುಂದಿನ ಜನ ಸಂಪರ್ಕ ಸಭೆಯ ವೇಳೆಗೆ ನಿಮ್ಮ ಎಲ್ಲಾ ಸಮಸ್ಯೆಗಳನ್ನು ಪರಿಹರಿಸಲು ಪ್ರಯತ್ನಿಸುವುದಾಗಿ ತಿಳಿಸಿ ಸಭೆಯನ್ನು ಮಧ್ಯಾಹ್ನ 2.00 ಗಂಟೆಗೆ ಮುಕ್ತಾಯಗೊಳಿಸಲಾಯಿತು.

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಸೆಸ್ಕ್, ಗ್ರಾಮಾಂತರ ಉಪ ವಿಭಾಗ, ಮದ್ದೂರು

ಪ್ರತಿಯನ್ನು,

1) ಪ್ರಧಾನ ವ್ಯವಸ್ಥಾಪಕರು, ಚಾವಿಸನಿನಿ, ನಿಗಮ ಕಾರ್ಯಾಲಯ, ಮೈಸೂರು ರವರ ಅವಗಾಹನೆಗಾಗಿ ಸಲ್ಲಿಸಿದೆ.
2) ಮುಖ್ಯ ಇಂಜಿನಿಯರ್(ವಿ), ಚಾವಿಸನಿನಿ, ಮೈಸೂರು ವಲಯ, ಮೈಸೂರು ರವರ ಅವಗಾಹನೆಗಾಗಿ ಸಲ್ಲಿಸಿದೆ.
3) ಅಧೀಕ್ಷಕ ಇಂಜಿನಿಯರ್(ವಿ), ಕಾ ಮತ್ತು ಪಾ ವೃತ್ತ, ಮಂಡ್ಯರವರ ಅವಗಾಹನೆಗಾಗಿ ಸಲ್ಲಿಸಿದೆ.
4) ಕಾರ್ಯನಿರ್ವಾಹಕ ಇಂಜಿನಿಯರ್(ವಿ), ವೃತ್ತ ಕಛೇರಿ, ಮಂಡ್ಯ ರವರ ಅವಗಾಹನೆಗಾಗಿ ಸಲ್ಲಿಸಿದೆ.
5) ಕಾರ್ಯನಿರ್ವಾಹಕ ಇಂಜಿನಿಯರ್(ವಿ), ವಿಭಾಗೀಯ ಕಛೇರಿ, ಮದ್ದೂರು ರವರ ಅವಗಾಹನೆಗಾಗಿ ಸಲ್ಲಿಸಿದೆ.
6) ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ವಿಭಾಗೀಯ ಕಛೇರಿ(ವಿ) ರವರ ಮಾಹಿತಿಗಾಗಿ ಸಲ್ಲಿಸಿದೆ.
7) ಲೆಕ್ಕಾಧಿಕಾರಿ(ಆಂಪ), ಸೆಸ್ಕ್, ವಿಭಾಗೀಯ ಕಛೇರಿ, ಮದ್ದೂರು ರವರ ಅವಗಾಹನೆಗಾಗಿ ಸಲ್ಲಿಸಿದೆ.
8) ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಮದ್ದೂರು ಉಪವಿಭಾಗ-1 ರವರ ಮಾಹಿತಿಗಾಗಿ ಸಲ್ಲಿಸಿದೆ.
9) ಸಹಾಯಕ ಇಂಜಿನಿಯರ್(ತಾಂ), ಉಪವಿಭಾಗ-1, ಮದ್ದೂರು ರವರ ಮುಂದಿನ ಕ್ರಮಕ್ಕಾಗಿ,
10) ಸಹಾಯಕ ಇಂಜಿನಿಯರ್(ತಾಂ), ಗ್ರಾಮಾಂತರ ಉಪವಿಭಾಗ, ಮದ್ದೂರು ರವರ ಮುಂದಿನ ಕ್ರಮಕ್ಕಾಗಿ,

ಮು.ಕ